OS No. 22/2022

PW-1

**(ಇಂದು ದಿಃ 25-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಮುಂದುವರೆದ ಪಾಟೀ ಸವಾಲುಃ- 2ನೇ ಪ್ರತಿವಾದಿಯ ಪರ ಶ್ರೀ.SKD ವಕೀಲರಿಂದಃ-</u>**

ಈ ಹಿಂದೆ ನಾವು ಸಲ್ಲಿಸಿದ್ದ ಅಸಲು ದಾವಾ ನಂಬರ 75/1998 ರಲ್ಲಿ ಈದಾವೆಯ 1 ಮತ್ತು 2 ನೇ ಪ್ರತಿವಾದಿಯರು ಮತ್ತು ಅವರ ತಾಯಿ ವಕೀಲರ ಮೂಲಕ ಹಾಜರಾಗಿ , ಪ್ರತಿವಾದ ಪತ್ರದಲ್ಲಿ ಈ ದಾವಾ ಆಸ್ತಿ ನನಗೆ ಸಂಬಂಧ ಇಲ್ಲ ಎಂದು ಹೇಳಿ ಬರೆಸಿದ್ದರು ಎಂದರೆ ನನಗೆ ಗೊತ್ತಿಲ್ಲ. ವಿಭಾಗದ ಆದಾರದ ಮೇಲೆ 1 ಮತ್ತು 2ನೇ ಪ್ರತಿವಾದಿಯರು ಅವರ ಹೆಸರಿಗೆ ತಲಾ ಅರ್ದ ಭಾಗ ಭೂಮಿಯ ಮುಟೇಷನ್ ಮಾಡಿಕೊಂಡ ನಂತರ ನಾನು ಉಪ ವಿಭಾಗ ಅಧಿಕಾರಿಗಳು ಸೇಡಂ ರವರ ಮುಂದೆ ಮೇಲನ್ಮವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅಪೀಲ ನಂಬರ 75/1998 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ತದಾನಂತರ ಅಸಲು ನಂಬರ 106/2005 ರಲಿಲ ನಾವೇ ಮಾಲೀಕರು ಮತ್ತು ಕಬ್ಜಾದರರು ಎಂದು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವೆಯಿ 1 ಮತ್ತು 2 ನೇ ಪ್ರತಿವಾದಿಯರು ದಿನಾಂಕ 15.10.2005 ರಂದು ಪ್ರತಿವಾದ ಪತ್ರ ಸಲ್ಲಿಸಿ ಅವರೇ ದಾವಾ ಸ್ವತ್ತಿನ ಮಾಲೀಕರು ನನಗೆ ದಾವಾ ಸ್ವತ್ತು ಸಂಬಂಧ ಇಲ್ಲ ಎಂದು ಹೇಳಿ ಬರೆಸಿದ್ದರು ಎಂದರೆ ಸರಿಯಲ್ಲ. 1998 ರಲ್ಲಿ ಉಪ ವಿಭಾಗ ಅಧಿಕಾರಿಗಳ ಮುಂದೆ ಇದ್ದ ಮೇಲನ್ಮವಿಯಲ್ಲಿ ಮತ್ತು ಅಸಲು ದಾವಾ ನಂಬರ 75/1998 ರಲ್ಲಿ ಈ ದಾವೆಯ 1 ಮತ್ತು 2 ನೇ ಪ್ರತಿವಾದಿಯರು ದಾವಾ ಸ್ವತ್ತಿನ ಮೇಲೆ ನನಗೆ ಮಾಲೀಕತ್ವ ಮತ್ತು ಕಬ್ಜ ಇಲ್ಲಎಂದು ಹೇಳಿದ್ದರು ಮತ್ತು ಬನನ್ನ ಹಕ್ಕನ್ನು ನಿರಾಕರಣೆ ಮಾಡಿದ್ದರು ಎಂದರೆ ಸ ರಿಯಲ್ಲ. ಅಸಲು ದಾವಾ ನಂಬರ 106/2005 ದಿನಾಂಕ 01.10.2008 ರಂದು ತೀರ್ಪು ಆಯಿತು ಎಂದರೆ ನನಗೆ ಗೊತ್ತಿಲ್ಲ.

ನನ್ನ ಮುತ್ಯಾ ಬದುಕಿದ್ದಾಗ ದಾವ ಸ್ವತ್ತು ಹೂರತು ಪಡಿಸಿ ನನ್ನ ಮುತ್ಯಾನಿಗೆ ಬೇರೆ ಆಸ್ತಿ ಇರಲಿಲ್ಲ . ಸಾಕ್ಷಿ ಮುಂದುವರೆದು ನನ್ನ ಮುತ್ಯಾ ದಾವಾ ಸ್ವತ್ತುನ್ನು ಸಾಯಬಣ್ಣ ತಂದೆ ಸಾಬಣ್ಣರವರಿಂದ 400/- ರೂಪಯಿಗಳಿಗೆ ದಾವಾಸ್ವತ್ತನ್ನು ಖರೀದಿ ಮಾಡಿದ್ದರು . ಸರ್ವೇ ನಂಬರ 39 ರ ಜಮೀನು ನನ್ನ ಮುತ್ಯಾ ನರಸಪ್ಪನಿಂದ ಬಂದಿದೆ. ಸರ್ವೇ ನಂಬರ 39 ರ ಜಮೀನು ಒಟ್ಟು 6 ಎಕರೆ ಶ10 ಗುಂಟೆ ಇತ್ತು. ಸದರಿ ಜಮೀನಲ್ಲಿ ನಾನು ನನ್ನ ಅಣ್ಣ ಭಾಗ

ಮಾಡಿಕೊಂಡಿದ್ದೇವೆ .ಸುಮಾರು 60-70 ವರ್ಷ ಗಳ ಹಿಂದೆ ಭಾ ಗ ಮಾಡಿಕೊಂಡಿದ್ದೇವೆ . ನಮ್ಮ ಮುತ್ಯಾ ನಿಂದ ಬಂದ ಮನೆ ಇದೆ . ಸದರಿ ಮನೆಯನಯ್ನ ನಾನು ನನ್ನ ಅಣ್ಣ ಭಾಗ ಮಾಡಿಕೊಂಡಿದ್ದೇವೆ. ಮನೆಯನ್ನು ಕೂಡ 60-70ವರ್ಷ ಗಳ ಹಿಂದೆ ಭಾಗ ಮಾಡಿಕೊಂಡಿದ್ದೇವೆ . ಅಸಲು ದಾವಾ ನಂಬರ 106/2005 ರಲ್ಲಿ ದಾವಾ ಆಸ್ತಿಯ ಜಂಟಪಿ ಮಾಲೀಕತ್ವದ ಬಗ್ಗೆ ವಿವಾದಾವಂಶ ಇರಲಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿವಾದಾಂಶ ಇಲ್ಲ ದ ಕಾರಣ ನ್ಯಾಯಲಾಯ ತನ್ನ ತೀರ್ಪಿ ನಲ್ಲಿ ಜಂಟಿಮಾಲೀಕತ್ವದ ಬಗ್ಗೆ ಯವುದೇ ತೀರ್ಪು ನೀಡಿಲ್ಲ ಎಂದರೆ ಸರಿಯಲ್ಲ, ಸದರಿ ದಾವೆಯ ತಿರ್ಪಿನಲ್ಲಿ ವಿಭಾಗ ಕೋರಿ ದಾವೆ ಸಲ್ಲಿಸಸಲು ನಮಗೆ ಯಾವುದೇ Liberty ಕೋಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ RA 203/2008 ರಲ್ಲಿ ಕೂಡ ವಿಭಾಗ ಕೋರಿ ದಾವೆ ಸಲ್ಲಿಸಸಲು ನಮಗೆ ಯಾವುದೇ Liberty ಕೋಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ.RSA No.7436/2013 ಯಾವುದೇ ತೀರ್ಪು ಆಗದೆ ನಾವು ಹಾಜರಾಗದ ಕಾರಣ ವಜಾ ಆಗಿದೆ ಎಂದೆರ ನನಗೆ ಗೊತ್ತಿಲ್ಲ. ಸದರಿ ಅಪೀಲನ್ನು ಪುನರ್ ಸ್ಥಾಪನೆ ಮಾಡಲು ಅರ್ಜಿ ಸಲ್ಲಿಸಿಲ್ಲಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಭಾಗ ಕೇಳಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ನನ್ನ ಮುತ್ಯಾ ನರಸಪ್ಪ ತನ್ನ ಮಗಳು ರಾಮಕ್ಕನಿಗೆ ದಾನ ಮಾಡಿದಾಗಿನಿಂದ ರಾಮಕ್ಕ 1 ಮತ್ತು 2 ನೇ ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ಮಾಲೀಕಾರಾಗಿ ಕಬ್ಜಾದಲ್ಲಿದ್ದೆರ ಎಂದರೆ ಸರಿಯಲ್ಲ. 1968 ರಲ್ಲಿ ರಾಮಕ್ಕನಿಗೆ ಹೆಸರಿಗೆ ಮುಟೇಷನ್ ಆದಾಗಿನಿಂದ ಇಲ್ಲಿಯವರೆಗೆ ಸದರಿ ಮುಟೇಷನನ್ನು ನಾವು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮುಟೇಷನ್ ಬಗ್ಗೆ ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ದಾವೆ ಕಾಲಪರೀಮಿತಿ ಒಳಗೆ ಇಲ್ಲ ಎಂದರೆ ಸರಿಯಲ್ಲ. ಮೊದಲಿನಿಂದ 1 ಮತ್ತು 2 ನೇ ಪ್ರತಿವಾದಿಯರು ನನ್ನ ಹಕ್ಕನ್ನು ನಿರಾಕರಣೆ ಮಾಡಿಕೊಂಡು ಬಂಂದಿದ್ದು ಕಾರಣ ನನ್ನನ ಹಕ್ಕು ನಷ್ಟ ಆಗಿದೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ತನ್ನ ಭಾಗ ದ ಜಮೀನನ್ನು 7ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ . ಖರೇದಿ ಮಾಡಿದ ಜಮೀನನಲ್ಲಿ 7 ನೇ ಪ್ರತಿವಾದಿ ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ

OS No. 22/2022

PW-1

ಹೆಂಡತಿಯ ಮಕ್ಕಳಿಗೆ ತೊಂದರೆ ಕೋಡುವ ಸಲುವವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**